ಕವಿತೆ



ಫೀನಿಕ್ಸ್ ರವಿ

ಕಲೆ: ರಾಮಕೃಷ್ಣ ಸಿದ್ರಪಾಲ





# ನೋವು

ಯಾರೋ ಬೈದಿದ್ದಕ್ಕೆ
ಕಟ್ಟಿಕೊಂಡ ಕನಸು ನುಚ್ಚು ನೂರಾಗಿ
ಆ ಚೂರು ನೂರು ಸಾವಿರವಾಗಿ
ಸಾವಿರ ಲಕ್ಷವಾಗಿ ಲಕ್ಷ ಕೋಟಿಯಾಗಿ
ಗಣಿತದ ಲೋಕದಲ್ಲಿ ಅಲೋಲಕಲ್ಲೋಲ
ಕೋಟಿ ಕೋಟಿ ಜೇನ್ನೊಣಗಳು ನಾಡಿನಿಂದ
ಕಾಡಿಗೆ ಹಾರುತ್ತಿರುವ ದೃಶ್ಯದಂತೆ
ಅವು ಹಾರುತ್ತಿರುವ ಶಬ್ದದಂತೆ ಮನಸೊಳಗೆ

ಒಂದು ಹನಿ ಕಣ್ಣೀರಾಗಲು ಅದೆಷ್ಟೋ
ಸೂಜಿ ಮೊನೆ ಗಾತ್ರದ ನೀರು ಬೇಕು!?
ತೊಟ ತೊಟನೆ ಹನಿಯುವುದು ಕಣ್ಣೀರು
ಪ್ರತಿ ಕಣ್ಣೀರ ಹನಿಯಲ್ಲೂ ನುಚ್ಚು ನೂರಾದ
ಕನಸಿನದೇ ಬಿಂಬ
ಸಾಂತ್ವನದ ಕೈ ಹೊರೆಸುವುದು ಕಣ್ಣೀರ
ಕಣ್ಣೀರ ಜೊತೆಗೆ ಅದರೊಳಗಿನ ಬಿಂಬವನ್ನು!

ಈ ಕಣ್ಣೀರ ಬೇರ ಹುಡುಕುತ್ತ
ಅಗೆಯುತ್ತ
ಹೋದರೆ ಅದು ನೆಲ ಜಲ ಪಾತಾಳ ತಲುಪಿ
ಏಳು ಸಮುದ್ರದ ಒಡಲೊಳಗೆ
ತಾಯಿಯ ಅರಸಿ ಓಡೋಡಿ ಬಂದ ಮಗುವಂತೆ
ಕಣ್ಣೀರು

ಅದು ಹಿಂಗಿ
ಚಿಪ್ಪಿನೊಳಗಿನ ಮುತ್ತಾಗಿ
ಅದು ಆವಿಯಾಗಿ ಆಕಾಶ ಸೇರಿ ಮಿಂಚು ಗುಡುಗು
ಸಿಡಿಲಿನಾರ್ಭಟ
ಮತ್ತೆ ನೆಲಕ್ಕೆ ನೀರ ಬಾಣಗಳಾಗಿ ಇಡೀ ಭೂಮಿ ಶರಪಂಜರ!
ಪ್ರತಿ ಜೀವಚರಕ್ಕೂ ಅಮೃತ ಜಲ!
ಸೋಲು ಗೆಲುವಿನ ಸೋಪಾನ!
ಅಳು ನಗುವಿನ ಬೇರಿಡಿದು ನಗುತ್ತಿರುವ ಹೂವು!